<u>ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ</u>
<u>ಮೊಳಕಾಲ್ಮೂರು</u>

ಓ.ಎಸ್. ಸಂಖ್ಯೆ 31/2016

ಪಿ.ಡಬ್ಲ್ಯೂ 2

ದಿನಾಂಕ:21.6.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀಸವಾಲುಃ 1 ರಿಂದ 5 ಮತ್ತು 7 ನೇ ಪ್ರತಿವಾದಿ ಪರ ವಕೀಲರಿಂದಃ

ನನಗೆ ಓದಲು ಬರೆಯಲು ಬರೆಯುತ್ತದೆ. ನನ್ನ ಮುಖ್ಯ ವಿಚಾರಣೆಯಲ್ಲಿ ಮಾಹಿತಿಯನ್ನು ನಾನೇ ಹೇಳಿ ಬರೆಸಿರುತ್ತೇನೆ. ನನಗೆ ಈ ದಾವಾದ ಎಲ್ಲಾ ಮಾಹಿತಿಗಳು ತಿಳಿದಿರುತ್ತವೆ. ನಾನು ನನ್ನ ಮುಖ್ಯವಿಚಾರಣೆಯಲ್ಲಿ ನಾನು ಸಹ ಜಂಟಿ ಕುಟುಂಬದ ಸದಸ್ಯ ಎಂದು ಹೇಳಿದ್ದು, ನಾನು ಈ ದಾವಾದಲ್ಲಿ ಪಕ್ಷಗಾರನಾಗಿರುವುದಿಲ್ಲ ಎಂದರೆ ಸರಿ. ವಾದಿಗಳು ಮತ್ತು 1 ರಿಂದ 7 ನೇ ಪ್ರತಿವಾದಿಗಳು ಪಿತ್ರಾರ್ಜಿತ ಆಸ್ತಿಗಳ ಆದಾಯದಿಂದ ದಾವಾ ಸ್ವತ್ತುಗಳನ್ನು ಖರೀದಿ ಮಾಡಿರುತ್ತಾರೆ ಎಂದು ದಾಖಲಾತಿಗಳನ್ನು ಹಾಜರುಪಡಿಸಿರುವ ಬಗ್ಗೆ ಗೊತ್ತಿಲ್ಲ. ವಾದಿಗಳು ಈ ದಾವಾದಲ್ಲಿ 3 ಆಸ್ತಿಗಳ ಮೇಲೆ ದಾವಾ ಹೂಡಿರುತ್ತಾರೆ, ಅವುಗಳ ಸರ್ವೆ ನಂ. 123, 2 ಎಕರೆ 38 ಗುಂಟೆ ಮತ್ತು ಸರ್ವೆ ನಂ. 53 ರಲ್ಲಿ 1 ಎಕರೆ 25 ಗುಂಟೆ ಮತ್ತು ಸರ್ವೆ ನಂ. 37 ರಲ್ಲಿ 4 ಎಕರೆಯಲ್ಲಿ 5 ಗುಂಟೆ ಕರಾರು ಇರುತ್ತದೆ. 1 ಮತ್ತು 2 ನೇ ದಾವಾ ಆಸ್ತಿಗಳು 1 ನೇ ಪ್ರತಿವಾದಿ ಮತ್ತು ಅವರ ಅಣ್ಣ ತಮ್ಮಂದಿರ ಮದ್ಯೆ ಆದ ಪಾಲುವಿಭಾಗದ ಆಸ್ತಿ ಎಂದು ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ್ದು, ನನಗೆ ಸದರಿ ಪಾಲು ವಿಭಾಗ ಪತ್ರದ ಬಗ್ಗೆ ಗೊತ್ತಿರುವುದಿಲ್ಲ ಪಾಲು ವಿಭಾಗದ ಮೂಲ ಪ್ರತಿ ಯಾರ ಬಳಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ.

ಸಾಕ್ಷಿಗೆ ದಿಃ3.2.1995 ರಲ್ಲಿ ಆದ ಪಾಲು ವಿಭಾಗ ಪತ್ರ ತೋರಿಸಿದ್ದು ಅದನ್ನು ಒಪ್ಪಿಕೊಂಡಿರುತ್ತಾರೆ. ಅದರಂತೆ ಮುಟೇಶನ್ ಗಳು ಆಗಿರುತ್ತವೆ ಎಂದರೆ ಸರಿ. ಸದರಿ ಪಾಲು ವಿಭಾಗ ಪತ್ರದಂತೆ ನನಗೂ ಸಹ ಪಾಲು ವಿಭಾಗ ಬಂದಿರುತ್ತದೆ ಎಂದರೆ ಸರಿ ಅವುಗಳನ್ನು ಸಾಕ್ಷಿಯು ಒಪ್ಪಿಕೊಂಡ ಕಾರಣ ದಿಃ3.2.1995 ರ ನೊಂದಾಯಿತ ಧೃಡೀಕೃತ ಪಾಲು ವಿಭಾಗ ಪತ್ರವನ್ನು ನಿಡಿ1 ಎಂದು, ಮುಟೇಶನ್ ರಿಜಿಸ್ಟರ್ ಎಕ್ಸ್ ಟ್ರಾಕ್ಟ್ ನಿಡಿ-2, 6 ಪಹಣಿಗಳನ್ನು ನಿಡಿ 3 ರಿಂದ 8 ಎಂದು ಗುರುತಿಸಲಾಯಿತು.

1 ನೇ ಪ್ರತಿವಾದಿ ದಾಸಪ್ಪ ತಂದೆಯ ಹೆಸರು ಕುರಿ ತಿಮ್ಮಯ್ಯ. ಕುರಿ ತಿಮ್ಮಯ್ಯನ ಮಕ್ಕಳು ನಿಡಿ-1 ರಲ್ಲಿ ಪಕ್ಷಗಾರರಾಗಿರುತ್ತಾರೆ ಎಂದರೆ ಸರಿ. ಕುರಿ ತಿಮ್ಮಯ್ಯನವರ ಒಟ್ಟು ಕುಟುಂಬದಲ್ಲಿ 3 ಆಸ್ತಿಗಳು ಇರುತ್ತವೆ. ಅವುಗಳು ಸರ್ವೆ ನಂ. 123 ಮತ್ತು ಸರ್ವೆ ನಂ.87 ಮತ್ತು ಸರ್ವೆ ನಂ.53 ಜಂಟಿ ಆಸ್ತಿ ಇರುತ್ತದೆ. ಸದರಿ ಆಸ್ತಿಗಳಲ್ಲಿ 4 ಜನರಿಗೆ ಭಾಗವಾಗಿರುತ್ತದೆ. ನಿಡಿ-1 ರ ಪ್ರಕಾರ ಸಿ ಅನುಸೂಚಿಯಲ್ಲಿ ತಿಮ್ಮಯ್ಯ, ಇ ಅನುಸೂಚಿಯಲ್ಲಿ ಕರಿಯಪ್ಪ ನನ್ನ ತಂದೆಗೆ ಆಸ್ತಿ ಬಂದಿರುತ್ತದೆ ಎಂದರೆ ಸರಿ. ಇನ್ನು ಎಲ್ಲರಿಗೂ 1000/- ಹಣವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ.122 ಮತ್ತು ಸರ್ವೆ ನಂ.87 ಆಸ್ತಿಗಳು ಮಾತ್ರ ನಿಡಿ1 ರ ಪಾಲು ವಿಭಾಗ ಪತ್ರದಲ್ಲಿ ಭಾಗವಾಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿಗಳು ನಿಡಿ-1 ರಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಪಾಲು ವಿಭಾಗ ಪತ್ರ ನಿಡಿ1 ದಾವಾ ಸ್ವತ್ತಿನ 3 ಆಸ್ತಿಗಳನ್ನು ಖರೀದಿ ಮಾಡಿದ ನಂತರ ಆಗಿರುತ್ತದೆ ಎಂದರೆ ಸರಿಯಲ್ಲ. ದಿಃ 27.1.1992 ರಂದು 2 ನೇ ಪ್ರತಿವಾದಿಯು 1 ಮತ್ತು 2 ನೇ ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 6.6.1986 ರಂದು 1 ನೇ ಪ್ರತಿವಾದಿಯು 3 ನೇ ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು 1 ಮತ್ತು 2 ನೇ ಪ್ರತಿವಾದಿಗಳ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಸಾಕ್ಷಿಯು ಸದರಿ ಆಸ್ತಿಗಳಲ್ಲಿ ವಾದಿಗಳಿಗೆ ಭಾಗವಿರುತ್ತದೆ ಎಂದು ನುಡಿದಿರುತ್ತಾರೆ. ನಿಡಿ-1 ರ ಪ್ರಕಾರ 1 ನೇ ಪ್ರತಿವಾದಿಗೆ ಕೇವಲ 1000/- ಹಣವನ್ನು ನೀಡಿ ಆಸ್ತಿಗಳಲ್ಲಿ ಯಾವುದೇ ಭಾಗವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಅವರು ಕುರಿಗಳನ್ನು ಕಾಯ್ದು ಬಂದ ಹಣದಿಂದ ದಾವಾ ಸ್ವತ್ತುಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. 1 ಮತ್ತು 2 ನೇ ದಾವಾ ಆಸ್ತಿಯ ಆದಾಯವನ್ನು 3 ನೇ ದಾವಾ ಆಸ್ತಿಯನ್ನು ಖರೀದಿ ಮಾಡಿರುವುದಿಲ್ಲ, ದಿಃ27.1.1992 ಮತ್ತು ದಿಃ 6.6.1986 ರಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತವಾಗಿ ಬಂದಿರುವುದಿಲ್ಲ, ಅವರು ಸ್ವಯಾರ್ಜಿತವಾಗಿ ಖರೀದಿ ಮಾಡಿದ ಆಸ್ತಿಗಳು ಎಂದರೆ ಸರಿಯಲ್ಲ. ಆದ ಕಾರಣ 1 ಮತ್ತು 2 ನೇ ಪ್ರತಿವಾದಿಗಳ ಸ್ವಯಾರ್ಜಿತ ಆಸ್ತಿ ಆದ ಕಾರಣ ಅವರುಗಳಿಗೆ ದಾವಾ ಆಸ್ತಿಗಳನ್ನು ಮಾರಾಟ ಮಾಡು ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯು 8 ನೇ ಪ್ರತಿವಾದಿಗೆ 3 ನೇ ದಾವಾ ಸ್ವತ್ತನ್ನು ತಮಗೆ ವಯಸ್ಸಾದ ಕಾರಣ ಆಸ್ತಿಯು ದೂರ ಇದೆ ಎಂದು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳ ಮಕ್ಕಳಿಗೆ ಭಾಗ ಕೇಳುವ ಹಕ್ಕು ಇಲ್ಲ ಎಂದರೆ ಸರಿಯಲ್ಲ. 2 ನೇ

ಪ್ರತಿವಾದಿಯ 1 ಮತ್ತು 2 ನೇ ದಾವಾ ಸ್ವತ್ತನ್ನು ಮರಣ ಶಾಸನ ಪತ್ರ ಬರೆದಿರುತ್ತಾರೆ ಎಂದರೆ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿಗಳ ದಾವಾ ಸ್ವತ್ತು ಅವರ ಸ್ವಯಾರ್ಜಿತ ಆಸ್ತಿ ಆದ ಕಾರಣ ಅವರಿಗೆ ಅವರ ಇಚ್ಛೆಯಂತೆ ವಿವೇವಾರಿ ಮಾಡುವ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ನಾನು ವಾದಿಗೆ ಕುಮ್ಮುಕ್ಕು ನೀಡಿ ಈ ದಾವಾ ವನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಪಾಟೀಸವಾಲುಃ 8 ನೇ ಪ್ರತಿವಾದಿ ಪರ ವಕೀಲರಿಂದಃ

ದಿಃ 6.8.1986 ರಂದು 1 ನೇ ಪ್ರತಿವಾದಿಯು 3 ನೇ ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಎಲ್ಲಾ ಅಣ್ಣ ತಮ್ಮಂದಿರು ಸೇರಿ ಖರೀದಿ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. 3 ನೇ ದಾವಾ ಸ್ವತ್ತು 1 ನೇ ಪ್ರತಿವಾದಿಯ ಹಕ್ಕು ಸ್ವಾಧೀನದಲ್ಲಿದ್ದು, ಅವವೆ ೀ ಕಂದಾಯ ಕಟ್ಟುತ್ತಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಮಗ 3 ನೇ ಪ್ರತಿವಾದಿ ಇಬ್ಬರೂ ಸೇರಿ 8 ನೇ ಪ್ರತಿವಾದಿಗೆ ದಿಃ 7.1.2016 ರಂದು 3 ನೇ ಅನುಸೂಚಿ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸದರಿ ಕ್ರಯಪತ್ರಕ್ಕೆ 3 ಜನರು, ರಾಮಣ್ಣ, ವೆಂಕಟೇಶ್ ಮತ್ತು ಗೋವಿಂದ ಸಹಿ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿಯ ಮಗ 3 ನೇ ಪ್ರತಿವಾದಿ ಇಬ್ಬರೂ ಸೇರಿ 8 ನೇ ಪ್ರತಿವಾದಿಗೆ ದಿಃ7.1.2016 ರಂದು 3 ನೇ ಅನುಸೂಚಿ ಸ್ವತ್ತನ್ನು ಅವರ ಗೃಹ ಖರ್ಚಿನ ಸಲುವಾಗಿ ಮತ್ತು ಕೈಸಾಲಗಳ ತೀರುವಳಿಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 7.1.2016 ರಂದು 3 ನೇ ಅನುಸೂಚಿ ಸ್ವತ್ತನ್ನು 8 ನೇ ಪ್ರತಿವಾದಿಯು ಹಕ್ಕು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಚಾರಗಳನ್ನು ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿರುತ್ತೇನೆ. ನಾನು 1 ರಿಂದ 5, 7, 8 ನೇ ಪ್ರತಿವಾದಿಗಳಿಗೆ ಮೋಸ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

8 ನೇ ಪ್ರತಿವಾದಿಯನ್ನು ಹೊರತುಪಡಿಸಿ ಯಾವುದೇ ಪಕ್ಷಗಾರರಿಗೂ 3 ನೇ ಅನುಸೂಚಿ ಸ್ವತ್ತಿನಲ್ಲಿ ಹಕ್ಕು ಸ್ವಾಧೀನ ಮತ್ತು ಅಧಿಕಾರವಿರುವುದಿಲ್ಲ ಎಂದರೆ ಸರಿಯಲ್ಲ. ನಾನು 8 ನೇ ಪ್ರತಿವಾದಿಗೆ ಮೋಸ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ ಇದೆ**

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಮೊಳಕಾಲ್ಮೂರು